**ದಿನಾಂಕಃ 10.07.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿ ವಾದಿ ಪರ ವಕೀಲರಿಂದಃ**

1. ನನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಗೊತ್ತಿರುತ್ತದೆ. ಜಮೀನಿನ ಸಂಬಂಧ ಅಣ್ಣ ತಮ್ಮಂದಿರು ಜಗಳವಾಡಿದ್ದು ಆ ವಿಚಾರ ಹೇಳಿರುತ್ತೇನೆಂದು ನುಡಿಯುತ್ತಾರೆ. ಯಾವಾಗ ಜಗಳವಾಯಿತು ಎಂದು ದಿನಾಂಕ ಹೇಳಲಾಗುವುದಿಲ್ಲ. ನನ್ನ ಹೊಲ ದಾವಾ ಆಸ್ತಿಯ ಪಕ್ಕದಲ್ಲಿದ್ದು ವಾದಿ ಹಾಗೂ ಪ್ರತಿವಾದಿಗೆ ಜಮೀನು ಅವರಿಗೆ ಸೇರಿದ್ದು ಎಂಬುದಾಗಿ ಜಗಳವಾಗುತ್ತಿದ್ದು ನಾನು ನೋಡಿರುತ್ತೇನೆ. ದಾವಾ ಆಸ್ತಿಯ ಮೂಲತಃ ಸರ್ವೆ ನಂ.14 ಎಂದು ಇತ್ತು. ಅದು ಮೂಲತಃ ಸರ್ಕಾರಿ ಜಮೀನು ಎಂದರೆ ಸರಿ. ಸದರಿ ಜಾಗದಲ್ಲಿ 30 ರಿಂದ 50 ಗುಂಟೆ ಜಮೀನು ಸರ್ಕಾರಕ್ಕೆ ಸೇರಿತ್ತು ಎಂದರೆ ಸರಿ. ಈ ಹಿಂದೆ ಸುಮಾರು ಜನ ಸದರಿ ಜಾಗದಲ್ಲಿ ಸಾಗುವಳಿ ಮಾಡುತ್ತಾ ಬಂದಿದ್ದರು ಎಂದರೆ ಸರಿ. ಅದರಂತೆ ವಾದಿ ಹಾಗೂ ಪ್ರತಿವಾದಿಯು ನಾವು ಕೂಡ ಸದರಿ ಜಾಗದಲ್ಲಿ ಸಾಗುವಳಿ ಮಾಡುತ್ತಾ ಬಂದಿರುತ್ತೇವೆಂದು ಜಾಗ ಮಂಜುರಾತಿಗೆ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರು ಎಂದರೆ ಸರಿ .ಅದರಂತೆ ಪ್ರತಿವಾದಿಗೆ 1 ಎಕರೆ 35 ಗುಂಟೆ ಮಂಜೂರಾಗಿರುತ್ತದೆಂದರೆ ಸರಿ. ಹಳೆ ಸರ್ವೆ ನಂ.14 ರಲ್ಲಿ ಸುಮಾರು 17 ಜನಕ್ಕೆ ಜಾಗವು ಮಂಜೂರಾಗಿರುತ್ತದೆ ಎಂದರೆ ಸರಿ. ಮಂಜೂರಾತಿ ಆಗುವ ಕಾಲಕ್ಕೆ ಯಾವುದೇ ದುರಸ್ದಿ ಪೋಡು ಆಗಿರುವುದಿಲ್ಲ ಎಂದರೆ ಸರಿ. ನಿರ್ದಿಷ್ಟವಾಗಿ ಪೋಡಿ ದುರುಸ್ತು ಆಗಿರುವುದಿಲ್ಲ ಅಂದಾಜು ಮೇರೆಗೆ ಸ್ವಾಧೀನ ಕೊಟ್ಟಿದ್ದರು ಎಂದರೆ ಸರಿ. ಆದ್ದರಿಂದ ವಾದಿಗೂ ಪ್ರತಿವಾದಿಗೂ ಜಮೀನಿನ ಒತ್ತುವರಿ ಸಂಬಂಧ ವಿವಾದ ಇದೆ ಎಂದರೆ ಸರಿ.ಯಾವ ದಿನಾಂಕದಂದು ವಾದಿಗೆ ಗ್ರಾಂಟ್ ಸರ್ಟಿಫಿಕೇಟ್ ಬಂದಿರುತ್ತದೆಂದು ನನಗೆ ಗೊತ್ತಿರುವುದಿಲ್ಲ. ವಾದಿಯ ಆಸ್ತಿಯ ಪೂರ್ವಕ್ಕೆ ಸರ್ಕಾರದ ಸ್ವತ್ತು ಎಂದರೆ ಸಾಕ್ಷಿಯು ಗೋಮಾಳದ ಜಾಗ ಇರುತ್ತದೆಂದು ನುಡಿಯುತ್ತಾರೆ. ಅದೇ ರೀತಿ ಪಶ್ಚಿಮಕ್ಕೆ ಬ್ಲಾಕ್ ನಂ.1ಎ ಅಂದರೆ ಪ್ರತಿವಾದಿಗೆ ಸೇರಿದ ಆಸ್ತಿ ಬರುತ್ತದೆಂದರೆ ಸರಿ, ಉತ್ತರಕ್ಕೆ ಬ್ಲಾಕ್ ನಂ.3ಎ ಸರ್ವೆ ನಂಬರ್ ಬರುತ್ತದೆಂದರೆ ನನಗೆ ಗೊತ್ತಿಲ್ಲ. ದಕ್ಷಿಣಕ್ಕೆ ಸರ್ಕಾರಿ ಜಮೀನು ಎಂದರೆ ಗೋಮಾಳ ಜಾಗ ಎಂದು ನುಡಿಯುತ್ತಾರೆ.

2. ನಾನು ವಾದಿ ಸ್ನೇಹಿತರು ಹಾಗೂ ಚೆನ್ನಾಗಿದ್ದೇವೆಂದರೆ ಸರಿ. ಆದ್ದರಿಂದ ಅವರ ಪರ ಸಾಕ್ಷ್ಯ ನುಡಿಯಲು ಈ ದಿನ ನ್ಯಾಯಾಲಯಕ್ಕೆ ಅವರೇ ಕರೆ ತಂದಿರುತ್ತಾರೆಂದರೆ ಸರಿ. ಅದೇ ರೀತಿ ಸಾಕ್ಷಿ ನುಡಿಯಲು ಹೇಳಿಕೊಟ್ಟಿರುತ್ತಾರೆಂದರೆ ಸರಿಯಲ್ಲ. ನನಗೆ ಗೊತ್ತಿರುವುದು ನಾನು ಹೇಳಿರುತ್ತೇನೆಂದು ನುಡಿಯುತ್ತಾರೆ. ಪ್ರತಿವಾದಿಯು ವಾದಿಯ ಜಾಗವನ್ನು ಒತ್ತುವರಿ ಮಾಡಿರುವುದಿಲ್ಲ ಕೇವಲ ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಈ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿಯೇ ಪ್ರತಿವಾದಿಯ ಸ್ವಾಧೀನಕ್ಕೆ ತೊಂದರೆ ಕೊಡುತ್ತಿದ್ದಾರೆಂದರೆ ಸರಿಯಲ್ಲ.

ಮರುವಿಚಾರಣೆ ಃ ಇರುವುದಿಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓದಿ, ಹೇಳಿ, ಕೇಳಿ ಸರಿ ಇದೆ.

**ಅಪರ ಸಿಜೆ ಮತ್ತು ಜೆ.ಎಂ.ಎಫ್.ಸಿ.,**
**ಕನಕಪುರ.**